ಅಥವಾ ಕೀಳರಿಮೆಯಿಂದಲೋ ಬೇರೆಯರೊಂದಿಗೆ ತಮ್ಮನ್ನು ತೊಡಗಿಸಿಕೊಳ್ಳದಿದ್ದರೆ ಕ್ರಮೇಣ  ಒಬ್ಬಂಟಿಯಾಗಿ ಬಿಡುತ್ತೇವೆ.'

ಕಪ್ಪು ಬಿಳಿ ತಾರತಮ್ಯ ಯುವ ಮನಸ್ಸಿನ ಮೇಲೆ ನಿಜವಾಗಿಯೂ ಪರಿಣಾಮ ಬೀರುತ್ತದೆ. ಸಣ್ಣ ಪ್ರಾಯದಲ್ಲಿ ಮಕ್ಕಳ ಮನಸ್ಸಲ್ಲಿ ಈ ಭೇದ ಹುಟ್ಟುಹಾಕಿದರೆ ಆತ ಅಥವಾ ಆಕೆ ಬೆಳೆದಂತೆ ಹಿಂಜರಿಕೆಯ ಗುಣ ಬೆಳೆಸಿಕೊಳ್ಳುತ್ತಾರೆ. ಪರಿಣಾಮವಾಗಿ ಬೆಳ್ಳಗಾಗಲು ಏನೆಲ್ಲಾ ಪ್ರಯೋಗಗಳನ್ನು, ಸೌಂದರ್ಯ ಸಾಧನವನ್ನು ಬಳಸುತ್ತಾರೆ. ಅದರ ಪರಿಣಾಮ ಇನ್ನೂ ಕೆಟ್ಟದೇ ಆಗುವುದು. ಯಾವು ಯಾವುದೇ ರಾಸಾಯನಿಕವನ್ನು ಬಳಿಸಿದ ಬಳಿಕ ಚರ್ಮ ತನ್ನ ಕಾಂತಿಯನ್ನೂ ಕಳೆದುಕೊಳ್ಳುತ್ತದೆ.

ಈ ಕೀಳರಿಮೆ ಬೆಳೆಸಿಕೊಳ್ಳುವುದಕ್ಕೆ ತಲೆತಲಾಂತರದಿಂದ ಬಂದ ಸೌಂದರ್ಯದ ವ್ಯಾಖ್ಯೆ ಹೇಗೆ ಕಾರಣವೋ, ಹಾಗೆಯೇ ಇಂದಿನ ಜಾಹಿರಾತು ಪ್ರಪಂಚವೂ ಕಾರಣ. ಹೆಚ್ಚಿನ ಸೌಂದರ್ಯವರ್ಧಕ ಜಾಹಿರಾತುಗಳು 'ಬಿಳಿ ವರ್ಣವೇ ಸೌಂದರ್ಯ. ಹಾಗಾಗಿ ಬೆಳ್ಳಗಾಗಲು ಈ ಕ್ರೀಮ್ ಬಳಸಿ, ಈ ಲೋಶನ್ ಹಚ್ಚಿಕೊಳ್ಳಿ ಎಂದು ನಿರಂತರವಾಗಿ ಹೇಳುತ್ತಾ ಬಂದಿವೆ. ಸೌಂದರ್ಯ ವರ್ಧಕಗಳ ಜಾಹಿರಾತು ಪ್ರಪಂಚವಂತೂ ಈ ವರ್ಣಭೇದದ ಮೇಲೆಯೇ ನಿಂತಿದೆ.

ಈ ಸವಾಲನ್ನು ಕಪ್ಪು ವರ್ಣದವರು ಸಮರ್ಥವಾಗಿ ಎದುರಿಸಬೇಕು. ಅದಕ್ಕೆ ಮುಖ್ಯವಾಗಿ ಬೇಕಾದದ್ದು ಕೀಳರಿಮೆ ಇಲ್ಲದ ಆತ್ಮವಿಶ್ವಾಸದ ನಡೆ.

ಕೆಲವು ಮನೆಗಳಲ್ಲಿ ಮಕ್ಕಳಿಗೆ ತಾವು ಕಪ್ಪು ಎಂಬುದು ಅರಿವಿಗೇ ಬರದಂತೆ ಬೆಳೆಸಿರುತ್ತಾರೆ. ಇದು ಉತ್ತಮ ಬೆಳವಣಿಗೆ. ಆಗ ಆಕೆಯೂ ತನ್ನ ಸಾಧನೆಯ ಕಡೆಗೇ ಗಮನ ಹರಿಸುತ್ತಾಳೆ.

ಮನಸ್ಸಿನಲ್ಲಿ ಕೀಳರಿಮೆಯನ್ನು ಬೆಳೆಸಿಕೊಂಡ ಯುವಕ ಯುವತಿಯರಿಗೆ ಹೇಳುವುದಿಷ್ಟೇ: ನೀವು ಕಪ್ಪೆಂದು ಯಾರೂ ನಿಮ್ಮನ್ನು ಯಾರೂ ದೂರ ಮಾಡುವುದಿಲ್ಲ. ನಿಮ್ಮ ಹಿಂಜರಿಕೆ ಅಥವಾ ಕೀಳರಿಮೆಯಿಂದ ನೀವೇ ಹಿಂಜರಿಯುತ್ತೀರಿ. ಹಾಗಿಲ್ಲದೆ ಎಲ್ಲರೊಂದಿಗೆ ಸಹಜವಾಗಿ ಮುಂದುವರಿಯಿರಿ, ಮಾತಾಡಿ. ಎಲ್ಲರೂ ಸ್ನೇಹಹಸ್ತ ಚಾಚಿಯೇ ಚಾಚುತ್ತಾರೆ.

ನಿಮ್ಮ ಆತ್ಮವಿಶ್ವಾಸವನ್ನು ಹೆಚ್ಚಿಸಿಕೊಳ್ಳಿ. ಮೊದಲಿಗೆ ನಿಮ್ಮನ್ನು ನೀವು ಪ್ರೀತಿಸುವುದನ್ನು ಕಲಿಯಿರಿ. ಆಗ ನಿಮ್ಮ ಸುತ್ತಲಿರುವವರೂ ನಿಮ್ಮನ್ನು ಪ್ರೀತಿಸುತ್ತಾರೆ.

ನಿಮ್ಮ ಸೌಂದರ್ಯ, ರೂಪ, ಬಣ್ಣ ಇವೆಲ್ಲದರ ಬಗ್ಗೆ ಗೀಳಾಗುವುದನ್ನು ಬಿಟ್ಟು ಸಾಧನೆಯ ಕಡೆಗೆ, ಕಲಿಕೆಯ ಕಡೆಗೆ ಗಮನ ಹರಿಸಿ, ಸಾಧಿಸಿ. ಆಗ ಎಲ್ಲರಿಗೂ ನೀವು ಮಾದರಿ ಯಾಗುತ್ತೀರಿ. ಸಾಧನೆಯ ಕಾಂತಿ ಚರ್ಮದ ನಿಜಕಾಂತಿ ಯನ್ನು ಖಂಡಿತಾ ಮರೆಮಾಡುತ್ತದೆ.

ಅಲಂಕಾರದ ಕಡೆಗೂ ಗಮನ ಕೊಡಿ. ಆದರೆ ಬೆಳ್ಳಗೆ ಕಾಣಬೇಕೆಂಬ ಉದ್ದೇಶದಿಂದ ಸಿಕ್ಕ ಸಿಕ್ಕ  ಟ್ರೀಟ್‌ಮೆಂಟ್ ಗಳನ್ನು ಮಾಡಿಕೊಳ್ಳಬೇಡಿ. ಇಂತಹ ಟ್ರೀಟ್‌ಮೆಂಟ್‌ಗಳು ಆರೋಗ್ಯಕ್ಕೆ ಖಂಡಿತಾ ಒಳ್ಳೆಯದಲ್ಲ.

ಉತ್ತಮ ಆಹಾರ, ಚೆನ್ನಾಗಿ ನೀರು ಕುಡಿಯುವುದು, ಹಣ್ಣು ಸೇವನೆ ನಿರಂತರವಾಗಿದ್ದರೆ ಚರ್ಮದ ಕಾಂತಿ, ಮುಖದ ಕಾಂತಿ ಹೆಚ್ಚುತ್ತದೆ. ಆಗ ಹೆಚ್ಚಿನ 'ಮೇಕ್‌ಓವರ್' ಅಗತ್ಯವೇ ಇಲ್ಲ.  ನಿಮಗಿಷ್ಟವಾದ, ನಿಮಗೊಪ್ಪುವ ವಸ್ತ್ರ, ಆಭರಣ ತೊಟ್ಟುಕೊಳ್ಳಿ. ಅತಿಯಾದ ಮೇಕಪ್ ಬೇಡ. ಸರಳತೆಯೇ ಸೌಂದರ್ಯ ಎಂಬುದನ್ನು ತಿಳಿದುಕೊಳ್ಳಿ. ●


ಸಿಗಂಧೂರು ಶ್ರೀದೇವಿ ಜ್ಯೋತಿಷ್ಯಂ



ಪ್ರಸಿದ್ಧ ಜ್ಯೋತಿಷ್ಯ ತಾಂತ್ರಿಕರು

ಶ್ರೀ ಚಂದ್ರಶೇಖರ್

ಕೇರಳ ಹಾಗೂ ಕೊಳ್ಳೆಗಾಲದ ಮಾಂತ್ರಿಕರು

99722 95444

ಭಾನಾಮತಿ ಸಿದ್ಧಿಸಾಧಕರು ಬೆಂಗಳೂರು ಮತ್ತು ಚೆನ್ನೈನಲ್ಲಿ ಅಪಾರ ಜನಮನ್ನಣೆ ಪಡೆದಿರುವ ಪ್ರಸಿದ್ಧ ಜ್ಯೋತಿಷ್ಯ ತಾಂತ್ರಿಕರು ಶ್ರೀ ಚಂದ್ರಶೇಖರ್‌ರವರು ಸಿಗಂಧೂರು ಚೌಡೇಶ್ವರಿ ದೇವಿಯ ಉಪಾಸಕರು ನಿಮ್ಮೆಲ್ಲ ಸಮಸ್ಯೆಗಳಿಗೆ ಶೀಘ್ರ ಶಾಶ್ವತ ಪರಿಹಾರ ಮಾಡಿಕೊಡುತ್ತಾರೆ.

ಕ್ರಿಶ್ಚಿಯನ್ ಹಾಗು ಮುಸ್ಲಿಂ ಬಾಂಧವರಿಗೆ ಯಂತ್ರ ಮಂತ್ರಗಳ ಸಹಾಯವಿಲ್ಲದೆ ಕಾರ್ಯಸಿದ್ಧಿ ಮಾಡಿಕೊಡಲಾಗುವುದು

ಸ್ತ್ರೀಯರಿಗೆ ವಿಶೇಷ ಪರಿಹಾರ

ಮದುವೆ ವಿಳಂಬ, ಪ್ರೀತಿಯಲ್ಲಿ ನಂಬಿ ಮೋಸ, ಇಷ್ಟಪಟ್ಟವರಿಂದ ಅನುಕೂಲ ಮಾಡಿಕೊಳ್ಳಲು, ಗಂಡ ಹೆಂಡತಿ ಕಲಹ, ವ್ಯಾಪಾರಾಭಿವೃದ್ಧಿ, ಸಾಲಗಾರರ ಕಿರಿಕಿರಿ, ಸಂತಾನ ಸಮಸ್ಯೆ, ಆರೋಗ್ಯ, ಲೈಂಗಿಕ ಸಮಸ್ಯೆ, ಕುಟುಂಬ ಕಲಹ, ಮಾಟಮಂತ್ರ ನಿವಾರಣೆ, ಸ್ತ್ರೀಯರ personal problems, ಇಷ್ಟಪಟ್ಟವರು ನಿಮ್ಮಂತಾಗಲು, ಹಣಕಾಸು, ಮಕ್ಕಳು ಪ್ರೀತಿ ಪ್ರೇಮದಲ್ಲಿ ಬಿದ್ದು ತಂದೆ ತಾಯಿಗಳ ಮಾತು ಕೇಳದಿದ್ದಲ್ಲಿ

ಸ್ತ್ರೀ ಪುರುಷರ ಕಠಿಣ ಸಮಸ್ಯೆಗಳನ್ನು ಗುಪ್ತವಾಗಿರಿಸಿ ಅತೀ ಶೀಘ್ರದಲ್ಲಿ ಪರಿಹಾರ ಮಾಡಿಕೊಡಲಾಗುವುದು

ಖಾಯಂ ವಿಳಾಸ:
ಸಿಗಂಧೂರು ಶ್ರೀದೇವಿ ಜ್ಯೋತಿಷ್ಯಂ,
ತಾಂತ್ರಿಕರು ಶ್ರೀ ಚಂದ್ರಶೇಖರ್
U.N ಆರ್ಕೆಡ್, ಇಂದ್ರಪ್ರಸ್ಥ ಹೋಟೆಲ್ ಹತ್ತಿರ,
ವಿಜಯನಗರ ಮುಖ್ಯ ಬಸ್ ನಿಲ್ದಾಣದ ಹಿಂಭಾಗ,
ವಿಜಯನಗರ, ಬೆಂಗಳೂರು